ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯಕರ್ನಾಟಕ

ದಿನಾಂಕ : DATE : 2/11/2019


# ಶಾಸಕರ ಅನರ್ಹತೆ ಷಡ್ಯಂತ್ರವನ್ನು ತೀರ್ಪು ಬಳಿಕ ತೆರೆದಿಡುತ್ತೇನೆ

## ಸಿಎಲ್‌ಪಿ ನಾಯಕರಾಗಿ ಸಿದ್ದರಾಮಯ್ಯ ವಿಫಲ

**ಚಿಕ್ಕಬಳ್ಳಾಪುರ:** ಶಾಸಕರ ಅನರ್ಹತೆ ಹಿಂದಿನ ಷಡ್ಯಂತ್ರವನ್ನು ಸುಪ್ರೀಂಕೋರ್ಟ್ ತೀರ್ಪಿನ ಬಳಿಕ ಬಿಚ್ಚಿಡುವುದಾಗಿ ಅನರ್ಹ ಶಾಸಕ ಡಾ.ಕೆ.ಸುಧಾಕರ್ ಹೇಳಿದರು.



ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, "ಅನರ್ಹ ಶಾಸಕರ ಬಗ್ಗೆ ಕೆಲ ನಾಯಕರು ಕೇವಲವಾಗಿ ಮಾತನಾಡುತ್ತಿದ್ದಾರೆ. ಅನರ್ಹತೆ ಪ್ರಶ್ನಿಸಿಯೇ ನಾವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದೇವೆ. ಮುಂದಿನ ವಾರ ತೀರ್ಪು ಬರುತ್ತದೆ. ಆಗ ಅನರ್ಹತೆ ಏಕೆ ಆಯಿತು? ಯಾರು ಇದರ ಹಿಂದೆ ಇದ್ದರು? ಎನ್ನುವುದನ್ನು ನಾನೇ ಇಡೀ ರಾಜ್ಯದ ಜನರ ಮುಂದಿಡುತ್ತೇನೆ," ಎಂದರು. ಮೈತ್ರಿ ಸರಕಾರದಲ್ಲಿ ಸಮನ್ವಯ ಸಮಿತಿ ಅಧ್ಯಕ್ಷರಾಗಿ, ಸಿಎಲ್‌ಪಿ ನಾಯಕರಾಗಿ ಮಾಜಿ ಸಿಎಂ ಸಿದ್ದರಾಮಯ್ಯ ತಮ್ಮದೇ ಪಕ್ಷದ ಶಾಸಕರ ಆತ್ಮಗೌರವ ಕಾಪಾಡುವಲ್ಲಿ ವಿಫಲರಾದರು. ಶಾಸಕರು ಯಾವ ನೋವಿನಿಂದ ಪಕ್ಷದಿಂದ ಹೊರಗೆ ಹೋಗಿದ್ದಾರೆಂದು ಕೆಲವರು ಇನ್ನೂ ಅರ್ಥ ಮಾಡಿಕೊಳ್ಳದೇ ಹೋದರೆ, ಆ ಬಗ್ಗೆ ಹೇಳಲು ನನ್ನಲ್ಲಿ ಪದಗಳಿಲ್ಲ ಎಂದು ಸಿದ್ದು ವಿರುದ್ಧ ಹರಿಹಾಯ್ದರು. ಅನರ್ಹ ಶಾಸಕರ ಕ್ಷೇತ್ರಕ್ಕೆ ಹೆಚ್ಚು ಅನುದಾನ ಕೊಟ್ಟರೆ ತಪ್ಪೇನು ಎಂದು ಇದೇ ವೇಳೆ ಪ್ರಶ್ನಿಸಿದರು.

2